# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯ, ಹೆಗ್ಗನಹಳ್ಳಿ ಉಪವಿಭಾಗ

## ವಾರ್ಡ್ ನಂ.70 :ರಾಜಗೋಪಾಲನಗರ

**ದಿನಾಂಕ: 19.12.2020 ರಂದು ಬೆಳಿಗ್ಗೆ 11.00 ಗಂಟೆಗೆ ಶ್ರೀಮತಿ ಕಮಲ ಹೆಚ್ ನೋಡಲ್ ಅಧಿಕಾರಿ, ವಾರ್ಡ್ 70ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಗ್ಗನಹಳ್ಳಿ ಉಪವಿಭಾಗ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:**

**ಸಭೆಯಲ್ಲಿ ಹಾಜರಿದ್ದವರು:**

| ಕ್ರಸಂ | ಹೆಸರು | ಪದನಾಮ |
|---|---|---|
| 1 | ಶ್ರೀಮತಿ ಕಮಲ ಹೆಚ್ | ನೋಡಲ್‌ಅಧಿಕಾರಿ–ವಾರ್ಡ್ ನಂ.70 |
| 2 | ಶ್ರೀ ಹೇಮಂತ್ ಕುಮಾರ್ ಎಸ್ ಕೆ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಹಾಗೂ ಸಂಚಾಲಕರು–ವಾರ್ಡ್ 70 |
| 3 | ಶಿವಲಿಂಗಯ್ಯಕೆ | ಹಿರಿಯಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.70 |
| 4 | ತ್ರಿವೇಣಿ | ಕಿರಿಯಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.70 |
| 5 | ಮಮತ | ಲಿಂಕ್ ವರ್ಕರ್ |
| 6 | ಮಂಗಳಮ್ಮ ಬಿ ಜಿ | ಲಿಂಕ್ ವರ್ಕರ್ |
| 7 | ಪ್ರವೀಣ್‌ರಾಜ್‌ಎನ್ | ಮಾರ್ಷಲ್ |
| 8 | ಸತೀಶ್ | ಗುತ್ತಿಗೆದಾರರು, ಬೀದಿದೀಪಗಳ ನಿರ್ವಹಣೆ |
| 9 | ಮುರ್ತುಜಸಾಬ ನದಾಫ | ಆರಕ್ಷಕ ಇಲಾಖಾ ಸಿಬ್ಬಂದಿ |

**:ನಡಾವಳಿಯ ವರದಿ:**

ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಹೇಮಂತ್‌ಕುಮಾರ್ ಎಸ್ ಕೆ ಮಾತನಾಡುತ್ತಾ ಸಭೆಗೆ ಹಾಜರಾದ ನೋಡಲ್ ಅಧಿಕಾರಿ ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು.

- **ಹಿಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಿದ ಸಮಸ್ಯೆಗಳಿಗೆ ಕೈಗೊಂಡ ಕ್ರಮಗಳ ಬಗ್ಗೆ**
  - ಖಾಲಿ ಇರುವ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಗೆ ಕಂದಾಯ ಅಧಿಕಾರಿ ರವರ ಕಛೇರಿಯನ್ನು ಸ್ಥಳಾಂತರಿಸುವ ಬಗ್ಗೆ: ಹೇಮಂತ್‌ಕುಮಾರ್ ಎಸ್.ಕೆ ಸಹಾಯಕ ಅಭಿಯಂತರರು, ವಾರ್ಡ್ ನಂ.70 ರವರು ಮಾತನಾಡಿ, ಜನವರಿ–2021 ರ ತಿಂಗಳಲ್ಲಿ ಸ್ಥಳಾಂತರಿಸಲು ಸ್ಥಳಾವಕಾಶ ಒದಗಿಸಿ ಕೊಡಲಾಗುವುದೆಂದು ತಿಳಿಸಿದರು.

- <u>ಬೀದಿದೀಪ ನಿರ್ವಹಣೆ ಬಗ್ಗೆ</u>
  - ಸತೀಶ್, ಗುತ್ತಿಗೆದಾರರು, ಬೀದಿ ದೀಪಗಳ ನಿರ್ವಹಣೆ ರವರು ಮಾತನಾಡಿ ಜಿ.ಕೆ.ಡಬ್ಲ್ಯೂ ಲೇಔಟ್ ಪಾರ್ಕ್ ಬಳಿ ವಿದ್ಯುತ್ ಕೇಬಲ್ ಕಟ್ಆಗಿದ್ದು, ಈ ಬಗ್ಗೆ ಬೆಸ್ಕಾಂರವರ ಗಮನಕ್ಕೆ ತಂದು ದುರಸ್ಥಿಪಡಿಸಲು ಕೋರಿದರು.
    - ಇದಕ್ಕೆ ಪ್ರತಿಕ್ರಿಯಿಸಿದ ನೋಡಲ್ ಅಧಿಕಾರಿರವರು ಈ ಬಗ್ಗೆ ಸಂಬಂಧಪಟ್ಟವರ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಲಾಗುವುದೆಂದು ತಿಳಿಸಿದರು.

- <u>ಸ್ವಚ್ಛತೆ ಮತ್ತು ಘನ ತ್ಯಾಜ್ಯ ನಿರ್ವಹಣೆ ಬಗ್ಗೆ:</u>
  - ಶಿವಲಿಂಗಯ್ಯ.ಕೆ, ಹಿರಿಯಆರೋಗ್ಯ ಪರಿವೀಕ್ಷಕರು, ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿರುವ Manual Scavenger ಗಳ ಪಟ್ಟಿಯನ್ನು ಸಭೆಗೆ ತಿಳಿಸಿದರು. ಸದರಿ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ಹೆಸರು | ವಯಸ್ಸು | ವಿಳಾಸ | ಸಂಪರ್ಕ ಸಂಖ್ಯೆ |
|---|---|---|---|---|
| 1 | ಶಿವರಾಜು | 30 ವರ್ಷ | ಕಿರಣ್ ಸ್ಕೂಲ್ ಹತ್ತಿರ | 9632607723 |
| 2 | ಕರಿಯಪ್ಪ | 45 ವರ್ಷ | ಕಿರಣ್ ಸ್ಕೂಲ್ ಹತ್ತಿರ | 8904013662 |

  - ನೋಡಲ್ ಅಧಿಕಾರಿರವರು ವಾರ್ಡ್70ರ ವ್ಯಾಪ್ತಿಯಲ್ಲಿರುವ ಬ್ಲಾಕ್ ಸ್ಪಾಟ್‌ಗಳ ಬಗ್ಗೆ ವಿಚಾರಿಸಲಾಗಿ, ಇದಕ್ಕೆ ತ್ರೀವೇಣಿ, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.70 ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿನಿತ್ಯವು ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲಾಗುತ್ತಿದೆ ಹಾಗೂ ರಾಜಗೋಪಾಲನಗರದ ಓಂ ಶಕ್ತಿ ಮೆಡಿಕಲ್ಸ್ ಬಳಿ ಇದ್ದ ಬ್ಲಾಕ್ ಸ್ಪಾಟ್ ಅನ್ನು ತೆರವುಗೊಳಿಸಿರುವ ಮಾಹಿತಿಯನ್ನು ಸಭೆಗೆ ತಿಳಿಸಿದರು.

- <u>ಕೋವಿಡ್-19, ಸಾಂಕ್ರಾಮಿಕರೋಗದ ಬಗ್ಗೆ</u>
  - ಶಿವಲಿಂಗಯ್ಯ.ಕೆ, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.70ರವರು ಮಾತಾನಾಡಿ ವಾರ್ಡ್70ರ ವ್ಯಾಪ್ತಿಯಲ್ಲಿ 5009 ಟೆಸ್ಟ್ ನಡೆಸಲಾಗಿದ್ದು, ಇವುಗಳಲ್ಲಿ 247 ಮಂದಿಯಲ್ಲಿ ಸೋಂಕಿತರು ಕಂಡುಬಂದಿರುತ್ತದೆ ಹಾಗೂ ಇದುವರೆಗೂ (18/12/2020ರವರೆಗೆ) 19833 ಟೆಸ್ಟ್‌ಗಳನ್ನು ನಡೆಸಲಾಗಿರುತ್ತದೆ ಎಂದು ತಿಳಿಸಿದರು ಹಾಗೂ ಸಾರ್ವಜನಿಕರಲ್ಲಿ ಹಾಗೂ ಬೀದಿ ವ್ಯಾಪಾರಿಗಳಲ್ಲಿ ಸ್ವಚ್ಛತೆ ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಬಗ್ಗೆ ಅರಿವು ಮೂಡಿಸಲಾಗಿದೆ ಎಂದು ತಿಳಿಸಿದರು.
  - ಪ್ರವೀಣ್‌ರಾಜ್ಎನ್, ಮಾರ್ಷಲ್‌ರವರು ಮಾತನಾಡಿ ವಾರ್ಡ್ 70ರ ವ್ಯಾಪ್ತಿಯಲ್ಲಿ ದಿನಾಂಕ:01/12/2020 ರಿಂದ15/12/2020 ರವರೆಗೆ ಮಾಸ್ಕ್ ಧರಿಸದವರಿಂದ ರೂ.18000/-ಗಳ ದಂಡವನ್ನು ಸಂಗ್ರಹಿಸಲಾಗಿದೆ ಹಾಗೂ ಮಾಸ್ಕ್ ಧರಿಸಲು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗಿದೆ ಎಂದು ತಿಳಿಸಿದರು.

- <u>ರಸ್ತೆ ಗುಂಡಿಗಳ ನಿರ್ವಹಣೆ ಬಗ್ಗೆ</u>
  - ಹೇಮಂತ್‌ಕುಮಾರ್ ಎಸ್.ಕೆ ಸಹಾಯಕ ಅಭಿಯಂತರರು, ವಾರ್ಡ್ ನಂ.70 ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ರಾಜೇಶ್ವರಿ ನಗರ ಹಾಗೂ ದೊಡ್ಡಣ್ಣ ಕೈಗಾರಿಕಾ ಪ್ರದೇಶದ ರಸ್ತೆಗಳಲ್ಲಿ ಬಿದ್ದಿರುವ ರಸ್ತೆಗುಂಡಿಗಳನ್ನು ಪಟ್ಟಿ ಮಾಡಿಕೊಂಡು ವೆಟ್ ಮಿಕ್ಸ್ ಅಳವಡಿಸಲಾಗಿದೆ. ಇನ್ನು 4-5 ದಿನಗಳಲ್ಲಿ ಡಾಂಬರು ಹಾಕಲಾಗುವುದು ಎಂದು ತಿಳಿಸಿದರು.

- ಮಾನ್ಯ ವಿಶೇಷ ಆಯುಕ್ತರು(ಆಡಳಿತ)ರವರು ದಿನಾಂಕ:19/12/2020ರಲ್ಲಿ ಭಿಕ್ಷಾಟನೆ ಮಾಡುವವರು, ವಸತಿ ನಿರ್ಗತಿಕರನ್ನು ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಿ ವರದಿ ನೀಡುವ ಬಗ್ಗೆ ಪ್ರಸ್ತಾಪಿಸಲು ಸೂಚಿಸಿರುವ ವಿಷಯಗಳಿಗೆ ಸಂಬಂಧಿಸಿದಂತೆ,
  - ಶ್ರೀಮತಿ ಕಮಲ ಹೆಚ್.ನೋಡಲ್ ಅಧಿಕಾರಿ ವಾರ್ಡ್ 70ರವರು ಮಾತಾನಾಡಿ ಮಾನ್ಯ ವಿಶೇಷ ಆಯುಕ್ತರು (ಆಡಳಿತ)ರವರು ಮಾನ್ಯ ಉಚ್ಚ ನ್ಯಾಯಾಲದಯದ ರಿಟ್ ಪಿಟಿಷನ್ ನಂ.10096/2020 ರಲ್ಲಿ ಆದೇಶಿಸಿರುವಂತೆ ಪಾಲಿಕೆಯ ದಾಸರಹಳ್ಳಿ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಭಿಕ್ಷಾಟನೆ ಮಾಡುವವರು, ವಸತಿ ನಿರ್ಗತಿಕರನ್ನು ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಿ ಸರ್ವೆ ಮಾಡಲು ಸಂಬಂಧಪಟ್ಟ ಪಾಲಿಕೆಯ ಕಾಮಗಾರಿ ಇಲಾಖೆ, ಆರೋಗ್ಯ ಇಲಾಖೆ, ಕಂದಾಯ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ರವರು ಗಳು ಪೋಲೀಸ್ ಇಲಾಖೆಯವರೊಂದಿಗೆ ಸಮನ್ವಯ ಸಾಧಿಸಿ ಜಂಟಿಯಾಗಿ ವರದಿ ಸಲ್ಲಿಸಬೇಕಾಗಿರುವುದರಿಂದ ಎಲ್ಲಾ ಇಲಾಖೆಯವರೊಂದಿಗೆ ಸಮಾಲೋಚಿಸಿ ತಯಾರಿಸಿದ ವರದಿಯನ್ನು ಪಡೆಯುವಂತೆ ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿದರು.
- ಇನ್ನಿತರ ಸಮಸ್ಯೆಗಳ ಬಗ್ಗೆ:

  BBMP SAHAYA APP:
  - ಹೇಮಂತ್‌ಕುಮಾರ್‌ಎಸ್.ಕೆ ಸಹಾಯಕ ಅಭಿಯಂತರರು, ವಾರ್ಡ್ ನಂ.70 ಮಾತನಾಡಿ ನಮ್ಮ ಇಲಾಖೆಗೆ ಸಂಬಂಧಪಟ್ಟ ದೂರುಗಳಿಗೆ ಶೀಘ್ರಗತಿಯಲ್ಲಿ ಪರಿಹಾರಕ್ರಮ ಕೈಗೊಳ್ಳುತ್ತಿದ್ದು, ಯಾವುದೇ ಸಮಸ್ಯೆಗಳು ಬಾಕಿ ಇರುವುದಿಲ್ಲ ಎಂದು ತಿಳಿಸಿದರು.
  - ತ್ರೀವೇಣಿ, ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಪಟ್ಟ ದೂರುಗಳನ್ನು ಪರಿಹರಿಸಲಾಗಿದೆ ಹಾಗೂ ಯಾವುದೇ ಬಾಕಿ ಇರುವುದಿಲ್ಲ ಎಂದು ತಿಳಿಸಿದರು.

- ಕೊನೆಯದಾಗಿ ಮಾನ್ಯ ನೋಡಲ್‌ಅಧಿಕಾರಿರವರುಸಭೆಗೆ ಹಾಜರಾದ ಎಲ್ಲಾಅಧಿಕಾರಿ/ನೌಕರರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆಯೂ ಈ ಸಭೆಗಳಲ್ಲಿ ಪೂರ್ವತಯಾರಿಯೊಂದಿಗೆ ಪಾಲ್ಗೊಂಡು ವಾರ್ಡಿನ ಕುಂದುಕೊರತೆಗಳತ್ತ ಗಮನಹರಿಸಿ ವಾರ್ಡ್ ಅಭಿವೃದ್ಧಿ ಪಡಿಸಲು ಸಹಕಾರ ನೀಡಬೇಕೆಂದು ಮನವಿ ಮಾಡಿದರು.
- ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದಶ್ರೀ ಹೇಮಂತ್‌ಕುಮಾರ್ ಎಸ್ ಕೆ ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು/ನೌಕರರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

28/12/2020

ಸದಸ್ಯ ಕಾರ್ಯದರ್ಶಿ–ವಾರ್ಡ್ 70 ಹಾಗೂ
ಸಹಾಯಕ ಅಭಿಯಂತರರು,

H Kamala.
(ಕಮಲ ಹೆಚ್) 28.12.2020.
ನೋಡಲ್ ಅಧಿಕಾರಿ ವಾರ್ಡ್–70

ಪ್ರತಿಯನ್ನು:

1) ಜಂಟಿಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
2) ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ.
3) ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
4) ಸಹಾಯಕ ಕಂದಾಯ ಅಧಿಕಾರಿ (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
5) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.70 ರವರ ಮಾಹಿತಿಗಾಗಿ
6) ಸಹಾಯಕ ಅಭಿಯಂತರರು (ವಿದ್ಯುತ್ ಬೆಸ್ಕಾಂ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
7) ಸಹಾಯಕ ಅಭಿಯಂತರರು (ವಿದ್ಯುತ್ (ಬೀದಿದೀಪ) ಬಿಬಿಎಂಪಿ ರವರ ಮಾಹಿತಿಗಾಗಿ ಸೂಕ್ತ ಕ್ರಮಕ್ಕಾಗಿ
8) ಕಛೇರಿ ಕಡತಕ್ಕೆ